ರೋಗಿಗಳನ್ನು ಪರೀಕ್ಷೆಮಾಡಲು ಹಾಕಿದ್ದ ಮಂಚದ ಬಳಿ ನಿಂತರು. 'ಇಲ್ಲಿ ಮಲಗುವುದಾದರೂ ಹೇಗೆ?' ನೇರ ಹೋಗಿ ತಮ್ಮ ಕುರ್ಚಿಯ ಮೇಲೆ ಕುಳಿತರು.

'ದುಡುಕಿ ಬಿಟ್ಟೆನೇ ನಾನು. ಅಲ್ಲಿಂದ ಹೀಗೆ ಹೊರಬರಬಾರದಿತ್ತೇನೋ! ಮೊದಲ ಸಲ ಮಗಳು ಬಂದಿದ್ದಾಳೆ. ಅವಳೊಡನೆ ಮತ್ತಷ್ಟು ಮಾತನಾಡಬಹುದಾಗಿತ್ತು. ಏನು ಕೆಲಸ ಮಾಡಿಬಿಟ್ಟೆ! ಅದಕ್ಕೇ ಇರಬೇಕು, ದೇವರೇ 433 ಡಾಲರ್ ದಂಡ ಹಾಕಿದ್ದಾನೆ. ಮನೇಲೇ ಇದ್ದಿದ್ದರೆ ಇದಾವುದೂ ಇರುತ್ತಿರಲಿಲ್ಲ. ಅವಳು ಯಾವಾಗಲೂ ಹೇಳುತ್ತಿರುವಂತೆ ಮೂರು ಅಥವಾ ನಾಲ್ಕು ಬೆಡ್‌ರೂಮ್ ಇರೋ ಮನೇಲಿರಬೇಕಾಗಿತ್ತು. ಹಿಂದಿದ್ದ ಮನೇಲೇ ಇದ್ದರೂ ಆಗ್ತಿತ್ತು.'

ಮೊಬೈಲ್ ಫೋನ್ ಸದ್ದಾಯಿತು. ತೆಗೆದುಕೊಂಡರು ರವಿಶಂಕರ್. ಹೆಂಡತಿ ಪದ್ಮಾ ಅವರ ಕರೆ ಅದು.

"ಹಲೋ."

"ರೀ ನೀವೆಲ್ಲಿದೀರಾ ಈಗ. ದವಾಖಾನೆ ತಾನೇ? ಸುಮ್ಮನೆ ಮನೆಗೆ ಬನ್ನಿ. ಸಾಕು ನಿಮ್ಮ ನಾಟಕ."

"ಅವರಿಬ್ಬರು?"

"ಅವರು ಆಗಲೇ ಹೋಗಾಯ್ತು. ಮನೇಗೆ ಬನ್ನಿ ಸಾಕು."

"ಅಂದರೆ."

"ಬನ್ನಿ ಆಮೇಲೆ ಹೇಳ್ತೀನಿ. ಬರೋವಾಗ ಜೋಪಾನ. ಮಳೆ ಜೋರಾಗೇ ಸುರೀತಿದೆ."

ರವಿಶಂಕರ್ ದವಾಖಾನೆಯ ಬಾಗಿಲು ಹಾಕಿಕೊಂಡು, ಮನೆಗೆ ಹೊರಟರು. ಈಗ ನಿಧಾನವಾಗಿ ಎಚ್ಚರ ವಹಿಸಿ ಡ್ರೈವ್ ಮಾಡಿದರು. ಮನೆಗೆ ಬಂದ ತಕ್ಷಣ ಪದ್ಮಾ ಪ್ರಾರಂಭಿಸಿದರು.

"ನೀವು ಹಾಗೆ ಹೊರಟಿದ್ದನ್ನು ನೋಡಿ ಅವರಿಬ್ಬರಿಗೂ ಸಂಶಯ ಬಂತು. ಅವರು ನಿಮ್ಮನ್ನು ಗಮನಿಸುತ್ತಾನೆ ಇದ್ದರು. ನಿಮಗೆ ಏನೋ ಹಿಡಿಸಿಲ್ಲ ಎನ್ನೋದು ಸ್ಪಷ್ಟವಾಯಿತು. ನೀವು ಹೊರಟ ತಕ್ಷಣ ಅನಿತಾಗೂ ಆಲ್ಬರ್ಟನಿಗೂ ಜಗಳ ಬೇರೆ ಶುರೂ ಆಯಿತು. ಇವಳು ಎತ್ತರದ ಧ್ವನಿಯಲ್ಲಿ, 'ಎಲ್ಲ ನಿನ್ನಿಂದಾನೇ ಆಗಿದ್ದು. ನೀನು ಬರದೇ ಹೋಗಿದ್ದರೆ ಏನೂ ಆಗ್ತಾ ಇರಲಿಲ್ಲ,' ಅಂತ ಹೇಳಿದಳು. ಕೇಳಿಸಿಕೊಂಡ ಅವನಿಗೆ ಎಲ್ಲಿಲ್ಲದ ಸಿಟ್ಟು ಬಂತು. 'ನೀನು ಕರೆದಿದ್ದಕ್ಕೆ ಬಂದೆ. ಇಲ್ಲದೇ ಹೋದರೆ

